



# 'ಅವಮಾನದ ಸವಾಲು ನಟನಾಗಿ ರೂಪಿಸಿತು

## ನಿರಂಜನ್ ಬಿ.ಎಸ್.

**ಸ್ಟಾರ್‌ಸುವರ್ಣದ 'ನಿನ್ನ ಜೊತೆ ನನ್ನ ಕಥೆ'ಯ ಅಜಿತ್ ನಾರಾಯಣ್**

◆ **ನಿಮ್ಮ ಪಾತ್ರವನ್ನು ಹೇಗೆ ಅನುಭವಿಸುತ್ತಿದ್ದೀರಿ?**

ಇದು ನನ್ನ ಮನಸಿಗೆ ಹಿಡಿಸುವಂತಹ ಪಾತ್ರ. ಸಮವಸ್ತ್ರ ಧರಿಸಿ ನಟಿಸುವ ಅವಕಾಶಗಳು ಅಪರೂಪ. ಇದರಲ್ಲಿ ಪೊಲೀಸ್ ಅಧಿಕಾರಿಯಾಗಿದ್ದೇನೆ. ಇದೇ ಕಾರಣಕ್ಕೆ ಪೊಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿ ಅವರ ಜೊತೆ ಸಾಕಷ್ಟು ವಿಚಾರಗಳನ್ನು ಚರ್ಚಿಸಿದ್ದೇನೆ. ಅವರ ಸಲಹೆಯಂತೆ ತಯಾರಿಯನ್ನು ಮಾಡಿಕೊಂಡಿದ್ದೇನೆ. ವೈಯಕ್ತಿಕವಾಗಿ ನಾನು ಭಾರತೀಯ ಸೇನೆ ಸೇರಬೇಕು ಎಂದು ಕನಸುಕಂಡಿದ್ದೆ. ಆರೋಗ್ಯ ಸಮಸ್ಯೆಯ ಕಾರಣಕ್ಕೆ ಆ ಪ್ರಯತ್ನದಲ್ಲಿ ಯಶಸ್ಸು ಗಳಿಸಲು ಸಾಧ್ಯ ಆಗಲಿಲ್ಲ. ಆದರೆ ಅದು ಕೈಗೂಡಲಿಲ್ಲ. ಈಗ ಈ ಪಾತ್ರದ ಮೂಲಕ ಅಂತಹ ಒಂದು ಸಣ್ಣ ಅನುಭವವನ್ನು ಗಳಿಸುತ್ತಿದ್ದೇನೆ. ಇದರಲ್ಲಿ ಸಾಮಾಜಿಕ ಕಾಳಜಿಯನ್ನು ಇಟ್ಟುಕೊಂಡು ಸಾರ್ವಜನಿಕ ಸೇವೆ ಮಾಡುವ ಅಧಿಕಾರಿಯಾಗಿ ಕರ್ತವ್ಯ ಮಾಡುತ್ತಿದ್ದೇನೆ ಇದು ಮನಸಿಗೆ ಹತ್ತಿರವಾಗುತ್ತಿದೆ. ಇಂತಹ ಪಾತ್ರಗಳ ನಿರ್ವಹಣೆ ಮಜಾ ಅನ್ನಿಸುತ್ತಿದೆ.

◆ **ವೈಯಕ್ತಿಕವಾಗಿ ಎಂತಹ ಪಾತ್ರಗಳನ್ನು ಮಾಡುವ ಆಸೆ ನಿಮ್ಮದು?**

ಪಾತ್ರ ವಿವರವನ್ನು ಕೇಳಿದ ತಕ್ಷಣ ಮಾಡಲು ಭಯ ಅನ್ನಿಸಿದರೆ, ಅಂತಹ ಪಾತ್ರವನ್ನೇ ಮಾಡಬೇಕು ಎಂಬ ಛಲ ಹುಟ್ಟುತ್ತದೆ. ಅಂತಹ ಪಾತ್ರವನ್ನೇ ಮಾಡಲು ಬಯಸುತ್ತೇನೆ. ಪಾತ್ರಕ್ಕೆ ನ್ಯಾಯ ಒದಗಿಸಲು ಸಾಧ್ಯವೇ ಎಂದು ಕಾಡಬೇಕು. ಅದು ನಮ್ಮನ್ನು ಸುಮ್ಮನೆ ಕೂರಲು ಬಿಡುವುದಿಲ್ಲ. ಆಗ ದಿನವೂ ಏನಾದರೂ ಹೊಸ ಕಲಿಕೆಗೆ ಪ್ರಯತ್ನ ಮಾಡುತ್ತೇವೆ. ಇದರಿಂದ ಏಕತಾನತೆ ಕೂಡ ದೂರವಾಗುತ್ತದೆ. ನಾನು ಕಲಿತಿದ್ದೇನೆ, ಇದನ್ನು ಸುಲಭವಾಗಿ ಮಾಡಬಲ್ಲೆ ಎನ್ನುವುದಲ್ಲ. ನಿತ್ಯವೂ ಕಲಿಕೆಗೆ ಅವಕಾಶ ಇರುವಂತಹ ಪಾತ್ರಗಳು ಸಿಗಬೇಕು ಎಂದು ಬಯಸುತ್ತೇನೆ. ಅದೇ ನಿಜಕ್ಕೂ ಪುಣ್ಯದ ಕೆಲಸ ಎಂದೆನಿಸುತ್ತದೆ. ದೀರ್ಘಕಾಲ ಕೆಲಸ ಮಾಡಲು ಬೋರ್ ಅನ್ನಿಸಬಾರದು. ಪಾತ್ರದ ಆಯ್ಕೆ ಮಾಡಿಕೊಳ್ಳುವಾಗ ಹೊಸತನಕ್ಕೆ ಆದ್ಯತೆ ಕೊಡಬೇಕು. ಅದೇ ರೀತಿಯ ಮಾನದಂಡಗಳನ್ನು ನಾನು ಪಾಲಿಸುತ್ತೇನೆ. ನನಗೆ ಮಾಡಲು ಸಾಧ್ಯವೇ, ನಾಲ್ಕು ಜನ ಬೆರಳು ತೋರಿಸಿ ಆಡಿಕೊಳ್ಳಬಾರದು ಎನ್ನುವ ಸವಾಲನ್ನು ಇಟ್ಟುಕೊಂಡು ಪಾತ್ರವನ್ನು ನಿರ್ವಹಿಸಲು ಮುಂದಾಗುತ್ತೇನೆ. ಇಂತಹ ಪಾತ್ರವನ್ನು ನಿರ್ವಹಿಸುವುದು ಸುಲಭ ಅಲ್ಲ. ಸಿನಿಮಾದಲ್ಲಿ ಇದೇ ಪಾತ್ರವಾದರೆ ನಾಲ್ಕಾರು ತಿಂಗಳಲ್ಲಿ ಮುಗಿಯುತ್ತದೆ. ಧಾರಾವಾಹಿ ಮೂರು ನಾಲ್ಕು ವರ್ಷ ಪ್ರಸಾರ ಆಗುವುದರಿಂದ ಅಷ್ಟು ಕಾಲವೂ ದೈಹಿಕ ಸಾಮರ್ಥ್ಯವನ್ನು ಕಾಪಾಡಿಕೊಳ್ಳಬೇಕು. ವರ್ಷವಿಡೀ ಒಂದೇ ರೀತಿಯ ಕಸರತ್ತು ಮಾಡಬೇಕಾಗುತ್ತದೆ. ಇದೆಲ್ಲವನ್ನೂ ಮನಸಿನಲ್ಲಿ ಇಟ್ಟುಕೊಂಡು ಪಾತ್ರವನ್ನು ಆಯ್ಕೆ ಮಾಡಿಕೊಳ್ಳುತ್ತೇನೆ.

◆ **ವಿಶೇಷ ಪಾತ್ರವನ್ನು ನಿರ್ವಹಿಸುವ ಸಂದರ್ಭ ಎದುರಾದರೆ, ಅದಕ್ಕೆ ಸಿದ್ಧತೆ ಹೇಗೆ ಮಾಡಿಕೊಳ್ಳುತ್ತೀರಿ?**

ಅಜಿತ್ ನಾರಾಯಣ್ ಪಾತ್ರ ಸಿಕ್ಕಾಗ ತಕ್ಷಣ ನನ್ನಿಂದ ಸಾಧ್ಯವೇ ಎನ್ನುವ ಪ್ರಶ್ನೆಯನ್ನು ಹುಟ್ಟುಹಾಕಿತು. ಮತ್ತೊಬ್ಬರು ಆಡಿಕೊಳ್ಳದಂತೆ ಮಾಡಬೇಕು ಎನ್ನುವುದು ನನ್ನ ಮನೋಭಾವ. ಪೊಲೀಸ್ ಇನ್‌ಸ್ಪೆಕ್ಟರ್ ಆಗಿರುವುದು ಹೊಸ ಅನುಭವ. ಪರಿಚಿತ ಅಧಿಕಾರಿಗಳಿಂದ ಕಾಸ್ಟ್ಯೂಮ್ ವಿವರವನ್ನು ತಿಳಿದುಕೊಂಡಿದ್ದೇನೆ. ಪೊಲೀಸ್ ಅಧಿಕಾರಿಗಳ ಡಿಸೈನರ್ ಹತ್ತಿರವೇ ಡ್ರೆಸ್ ಹೊಲಿಸಿದ್ದೇನೆ. ಯಾವ ರ‍್ಯಾಂಕ್ ಅಧಿಕಾರಿಗಳು ಯಾವ ಶೇಡ್‌ನ ಖಾಕಿ ಹಾಕುತ್ತಾರೆ, ಬ್ಯಾಡ್ಜ್ ಹೇಗಿರುತ್ತವೆ. ಅವರ ಇತಿಮಿತಿಗಳ ಬಗ್ಗೆ ತಿಳಿದುಕೊಂಡು ಮಾಡಿದ್ದರಿಂದ ನನ್ನದೇ ಇದು ಎನ್ನುವ ಅನುಭವ ಬರುತ್ತದೆ. 'ಕಮಲಿ'ಯಲ್ಲಿ ರಿಷಿ ಪಾತ್ರ ಮನೆಮಾತಾಗಿತ್ತು. ಅದರಿಂದ ಹೊರಗೆ ಬಂದು ನೋಡುವಂತೆ ಆಗಬೇಕು. ಈ ಪಾತ್ರ ಗೆಲ್ಲಬೇಕು ಎಂದರೆ ಮತ್ತೊಂದು ಪಾತ್ರ ನೆನಪಿಗೆ ಬರಬಾರದು ಎಂದು ಅಂದುಕೊಳ್ಳುತ್ತೇನೆ.

◆ **ಬಣ್ಣದ ಲೋಕಕ್ಕೆ ಬಂದ ದಿನಗಳನ್ನು ನೀವು ಹೇಗೆ ಎದುರಿಸಿದಿರಿ?**

ಶಾಲಾ ದಿನಗಳಿಂದಲೂ ಅಭಿನಯದ ಆಸಕ್ತಿ ಇರಲಿಲ್ಲ. ಸಭಾಕಂಪನ ಎನ್ನುವುದು ನನ್ನನ್ನು ಭೀತಿಗೆ ತಳ್ಳುತ್ತಿತ್ತು. ನನಗೆ ಆಟ ಎಂದರೆ ಅಚ್ಚುಮೆಚ್ಚು. ಮೆಡಲ್ ಮತ್ತು ಸರ್ಟಿಫಿಕೇಟ್‌ಗಾಗಿ ಮಾತ್ರ ವೇದಿಕೆ ಏರಿದ್ದೆ. ಹಾಡು–ಡಾನ್ಸ್ ನನ್ನ ಆಯ್ಕೆಯಲ್ಲ. ಒಮ್ಮೆ ಅಪಘಾತವಾಗಿ ನನ್ನ ಕಾಲಿಗೆ ದೊಡ್ಡ ಪೆಟ್ಟಾಯಿತು. ಆ ಸಮಯದಲ್ಲಿ ಏನಾದರೂ ಮಾಡಲೇಬೇಕಾದ ಸಂದರ್ಭ ಎದುರಾಯಿತು. ನನ್ನ ಗುರಿಗೆ ಬ್ರೇಕ್ ಬಿದ್ದಿತ್ತು. ನನ್ನೆದುರು ಬರೀ ಪ್ರಶ್ನೆಗಳೇ ಎದುರಾಗಿ ನಿಂತಿದ್ದವು. ಇಂತಹ ಸಂದರ್ಭದಲ್ಲಿ ಯಾರು ಏನೇ ಹೇಳಿದರೂ ಸರಿ ಅನ್ನಿಸುತ್ತಿತ್ತು. ನನ್ನ ಅಕ್ಕ 'ನಿನ್ನ ಧ್ವನಿ ಚೆನ್ನಾಗಿದೆ. ಆರ್‌ಜೆ ಆಗಲು ಪ್ರಯತ್ನಿಸು' ಎಂದು ಸಲಹೆ ಕೊಟ್ಟಳು. ಅದರಂತೆ ಕೆಲಸವನ್ನೂ ಆರಂಭಿಸಿದೆ. ಕೆಲ ದಿನಗಳ ನಂತರ ಅದು ಏಕತಾನತೆ ಕೆಲಸ ಎಂದು ಅನ್ನಿಸಿತು. ನನ್ನ ಸ್ನೇಹಿತರು ಕಿರುಚಿತ್ರ ಮಾಡುತ್ತಿದ್ದರು. ಅದರ ನಾಯಕನಿಗೆ ತೊಂದರೆ ಆಗಿದ್ದರಿಂದ ಅವರು ಬಂದು ನನಗೆ ಮಾಡಲು ಮನವಿ ಮಾಡಿದರು. ನಟನೆಯ ಗಂಧಗಾಳಿ ಗೊತ್ತಿರಲಿಲ್ಲ. ಒಂದು ದಿನ ಮಾಡಬಹುದಾದ ಚಿತ್ರೀಕರಣವನ್ನು ನನ್ನಿಂದ ಮೂರು ದಿನ ಮಾಡಬೇಕಾಗಿ ಬಂತು. ಆ ಕೆಲಸದ ಬಗ್ಗೆ ಗಂಭೀರತೆ ಕೂಡ ಇರಲಿಲ್ಲ. ಆಗ ಎದುರಾದ ಅವಮಾನ ನನಗೆ ಸವಾಲನ್ನು ಒಡ್ಡಿತು. ಅದನ್ನೇ ಮಾಡಬೇಕು ಎಂದು ಮತ್ತೆರಡು ಕಿರುಚಿತ್ರ ಮಾಡಿದೆ. ನಂತರ 'ವಾಸ್ಕೋಡಿಗಾಮ' ಸಿನಿಮಾ ಮಾಡಿದೆ. ಆ ಸಮಯ ನಿಜಕ್ಕೂ ಸಂಕಷ್ಟದ ದಿನಗಳು. ಪರಿಸ್ಥಿತಿ ನನಗೆ ಅಷ್ಟು ಸುಲಭವಿರಲಿಲ್ಲ. ನಾನು ಏನು ಅನ್ನೋದು ಸಾಧಿಸಿ ತೋರಿಸಬೇಕಾಗಿತ್ತು. ಒಳ್ಳೆಯ ನಟ ಎನ್ನುವುದನ್ನು ಪ್ರೂವ್ ಮಾಡಬೇಕು ಎಂದು ಹಟ ಹಿಡಿದು ಪ್ರಯತ್ನಿಸಿದೆ. ಆ ನಿಟ್ಟಿನಲ್ಲಿ ಯೋಚಿಸಿದಾಗ ಗುರುತಿಸುವ ಮಟ್ಟಿಗೆ ಬೆಳೆದಿದ್ದೇನೆ.

■ **ರಾಘವೇಂದ್ರ ಕೆ.**